**ಚಾಸಾಃ 11  ಫ್ರಾಸಾಃ 8**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | :ಅವಿನ್ ಕುಮಾರ್ ಆರ್.ಸಿ |
| ತಂದೆಯ ಹೆಸರು | :ಚಿನ್ನಪ್ಪ ಗೌಡ |
| ಪ್ರಾಯ | :52 ವರ್ಷ |
| ಉದ್ಯೋಗ | :ಕಂದಾಯ ನಿರೀಕ್ಷಕರು, ಸುಳ್ಯ |
| ವಾಸ | :ಕೇರ್ಪಳ, ಸುಳ್ಯ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 18.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 13.7.2023 ರಿಂದ ಸುಳ್ಯ ತಾಲ್ಲೂಕಿನ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಸಂಪಾಜೆ ಗ್ರಾಮ ಬೀಜದಕೋಡಿ ಎಂಬಲ್ಲಿನ ಸಜ್ಜನ ಸಭಾಭವನ ಯಾರ ಮಾಲೀಕತ್ವದಲ್ಲಿದೆ ಎನ್ನುವ ಬಗ್ಗೆ ವರದಿ ನೀಡುವಂತೆ ಸುಳ್ಯ ಪೊಲೀಸರು ತಹಶೀಲ್ದಾರ್ ರನ್ನು ಕೋರಿದ್ದು ಆ ಬಗ್ಗೆ ವರದಿ ನೀಡುವಂತೆ ದಿ. 8.7.2025 ರಂದು ನನಗೆ ತಹಶೀಲ್ದಾರರು ಸೂಚಿಸಿದ್ದರು. ಅದರಂತೆ ನಾನು ಆ ವಿಚಾರವನ್ನು ಫ್ರಾಸಾ-7 ರವರಿಗೆ ತಿಳಿಸಿ ಅವರನ್ನು ಹಾಗೂ ಪೊಲೀಸ್ ಪೇದೆ ಮಂಜುನಾಥ್ ಎನ್ನುವವರನ್ನು ಕರೆದುಕೊಂಡು ದಿ. 23.7.2025 ರಂದು ಮದ್ಯಾಹ್ನ 1.39 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿದ್ದೆ. ಆ ಸ್ಥಳವನ್ನು ಪೊಲೀಸ್ ಪೇದೆ ಮಂಜುನಾಥ್ ನಮಗೆ ತೋರಿಸಿದರು.

ನಾವು ಸ್ಥಳಕ್ಕೆ ಹೋಗುವಾಗ ಎಫ್.ಎಂ.ಬಿ ನಕ್ಷೆ ಹಾಗೂ ಭೂ ಪರಿವರ್ತನಾ ನಕ್ಷೆಯನ್ನು ತೆಗೆದುಕೊಂಡು ಹೋಗಿದ್ದೆವು. ಅದರ ಆಧಾರದ ಮೇರೆಗೆ ಸದರಿ ಜಾಗವು ಸ.ನಂಃ 85/1C3 ರಲ್ಲಿ ಅದು 87.25 ಸೆಂಟ್ಸ್ ನಲ್ಲಿದ್ದು, ಅದು ಎಸ್.ಎಸ್. ಉಮ್ಮರ್ ಎನ್ನುವವರ ಮಾಲೀಕತ್ವದಲ್ಲಿದೆ ಎನ್ನುವುದು ತಿಳಿದುಬಂತು. ಈ ಬಗ್ಗೆ ನನ್ನ ಜೊತೆ ಇದ್ದ ಗ್ರಾಮ ಸಹಾಯಕ ಸೋಮಣ್ಣ ಸ್ಥಳದಲ್ಲಿ ಜಿ.ಪಿ.ಎಸ್ ಪೋಟೋ ತೆಗೆದಿದ್ದಾನೆ. ಈ ಬಗ್ಗೆ ಫ್ರಾಸಾ–7 ರವರು ನನಗೆ ವರದಿ ನೀಡಿದ್ದು, ಅದರಂತೆ ನಾನು 25.7.2025 ರಂದು ಜಿ.ಪಿ.ಎಸ್ ಪೋಟೋ ಹಾಗೂ ಪಹಣಿ ಪತ್ರಿಕೆ ಲಗತ್ತಿಸಿ ನನ್ನ ವರದಿಯನ್ನು ತಹಶೀಲ್ದಾರ್ ರವರಿಗೆ ಸಲ್ಲಿಸಿದ್ದೇನೆ. ಸದರಿ ವರದಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–23 ಎಂದು ಗುರುತಿಸಲಾಗಿದ್ದು, ಅದರಲ್ಲಿ ನನ್ನ ಸಹಿ ಇದೆ. ನಾನು ನನ್ನ ವರದಿಯೊಂದಿಗೆ ಲಗತ್ತಿಸಿದ ಪಹಣಿ ಪತ್ರಿಕೆ ನಿಪಿ–24 ರ ದಾಖಲೆಯಾಗಿದೆ. ನಾನು ಸ್ಥಳದಲ್ಲಿ ತೆಗೆದ ಜಿ.ಪಿ.ಎಸ್ ಪೋಟೋ ನಿಪಿ–22 ರ ದಾಖಲೆಯಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

Field Measurement Book(FMB) ನಮ್ಮ ಬಳಿ ಇರುವುದಿಲ್ಲ ಅದು ಸರ್ವೆ ಇಲಾಖೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ತಮ್ಮ ಬಳಿ ಜೆರಾಕ್ಸ್ ಪ್ರತಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸ್ಥಳವನ್ನು ಎಫ್.ಎಂ.ಬಿ ನಕ್ಷೆ ಆಧರಿಸಿ ಕಂಡು ಹಿಡಿದಿದ್ದೇನೆ ಎಂದು ನಿಪಿ–23 ರ ನನ್ನ ವರದಿಯಲ್ಲಿ ಹೇಳಿಲ್ಲ. ಈಗ ಜಮೀನನ್ನು ಅಳತೆ ಮಾಡುವ ಕಾರ್ಯ ಸರ್ವೆ ಇಲಾಖೆಗೆ ನೀಡಲಾಗಿದೆ ಎಂದರೆ ಸರಿ. ಒಂದು ಜಮೀನನ್ನು ಅಳತೆ ಮಾಡಬೇಕಾದರೆ ಚೈನ್ ಹಿಡಿದು ಅಳತೆ ಮಾಡಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ನಾವು ಚೈನ್ ಹಿಡಿದು ಜಾಗವನ್ನು ಅಳತೆ ಮಾಡಿಲ್ಲ ಎಂದರೆ ಸರಿ. ನಮ್ಮ ತಹಶೀಲ್ದಾರ್ ರವರ ಕೋರಿಕೆಯ ಮೇರೆಗೆ ನಾನು ನಿಪಿ–23 ರ ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಹಕರಿಸುವ ಸಲುವಾಗಿ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಗ್ರಾಮ ಸಹಾಯಕ ನಮ್ಮ ಜೊತೆಗೆ ಸ್ಥಳಕ್ಕೆ ಬಂದಿದ್ದ. ನಾವು ಗ್ರಾಮ ಸಹಾಯಕನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಆತ ನಿಪಿ–22 ರ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ